ಮಕ್ಕಳ ತಂದೆ. ದೇಹದ ಹಸಿವನ್ನು ತಣಿಸಿಕೊಳ್ಳಲು ಅಡ್ಡದಾರಿ ಹಿಡಿಯುವ ಕಲ್ಪನೆಯೇ ವನಿತನ ಮೈಮೇಲೆ ಮುಳ್ಳೇಳಿಸುತ್ತಿತ್ತು. ತನ್ನಕ್ಕ ಅವನನ್ನು ಎಷ್ಟರಮಟ್ಟಿಗೆ ನಂಬಿದ್ದಾಳೆಂದರೆ ಅವನ ಅಂಗಡಿ ಎದುರಿನಲ್ಲಿರುವುದು ಒಂದು ರಕ್ಷಾಕವಚವೆಂಬಂತೆ ಅವಳಿಗೆ ಸಮಾಧಾನ. ಬಾಯ್ಬಿಟ್ಟು ಅವನೆದುರು ಇಂತಾ ಮಾತುಗಳನ್ನು ಆಡಿಯೂ ಇದ್ದಳು ಭಾಗ್ಯ. ಮನೆಗೆ ಬೇಕಾದ ಸಾಮಾನಿನ ಪಟ್ಟಿಯನ್ನು ಅವನ ಕೈಗಿತ್ತು ನಿಶ್ಚಿಂತಳಾಗುತ್ತಿದ್ದಳು. ಹೊತ್ತಲ್ಲದ ಹೊತ್ತಿನಲ್ಲಿ ಅವನು ಬಂದು ಬಾಗಿಲು ಬಡಿದರೆ ಉದ್ದೇಶಪೂರ್ವಕವಾಗಿ ಬಾಗಿಲು ತೆಗೆಯುತ್ತಿರಲಿಲ್ಲ ವನಿತಾ. ಶುದ್ಧ ಗಾಳಿಯ ಹಂಬಲವಾದರೆ ಹಿತ್ತಲುಕಡೆಯ ಸಾಮ್ರಾಜ್ಯ ಇತ್ತು. ಅಲ್ಲಿ ಅವಳೇ ನೆಟ್ಟುಕೊಂಡ ಹೂಗಿಡಗಳು ಮೊಗ್ಗೊಡೆದು ಹೂ ಅರಳಿಸುತ್ತಿದ್ದುವು. ತರಕಾರಿಗಳು ಹಸಿರು ಮುರಿಯುತ್ತಿದ್ದುವು. ಮೂಲೆಯಲ್ಲೊಂದು ಮದರಂಗಿ ಗಿಡ ಎತ್ತರಕ್ಕೆ ಬೆಳೆಯುತ್ತಿತ್ತು, ಅಲ್ಲಲ್ಲಿ ಮಿಂಚತೊಡಗಿದ ಅವಳ ಬಿಳಿ ತಲೆಗೂದಲಿಗೆ ಮದ್ದೆರೆಯಲು. ಅಕ್ಕ ಐವತ್ತಾಗುವುದರೊಳಗೆ ಮದುಕಿಯಂತಾಗಿದ್ದಾಳೆ. ಅರೆವಾಸಿ ತಲೆಗೂದಲು ಬಿಳುಪು ತಿರುಗಿದೆ. ಮಂಡಿನೋವು ಶುರುವಾಗಿದೆ. ಬಿ.ಪಿ. ಕೂಡಾ. ಅವಳು ಮನಸ್ಸನ್ನು ಗಟ್ಟಿ ಮಾಡಿಕೊಂಡು ಒಂಟಿ ಜೀವನಕ್ಕೆ ಒಗ್ಗಿಕೊಂಡಿದ್ದಾಳೆ ಸರಿ, ಆದರೆ ತಾನೂ ಯಾಕೆ ಹಾಗಿರಬೇಕೆಂದು ಬಯಸುತ್ತಾಳೆ ಎನ್ನುವುದು ವನಿತನ ಪಾಲಿಗೆ ಒಡೆಯದ ಒಗಟು.

'ನೀನು ಭಾರೀ ಒಳ್ಳೆಯೋನು ಅಂತ ನಂಬಿಕೊಂಡಿರೋನು ನಂಗೆ ದಿನಾ ಕಾಟ ಕೊಡ್ತಿದಾನೆ ಅಕ್ಕಾ. ಅವನಿಂದ ತಪ್ಪಿಸ್ಕೋಬೇಕು ಅಂದ್ರೆ ನಾನು ಮದುವೆ ಮಾಡ್ಕೊಂಡು ಅವನ ಕಣ್ಣಿಂದ ದೂರ ಹೋಗ್ಬೇಕು. ಇಂತದೆಲ್ಲಾ ಸೂಕ್ಷ್ಮ ಅರ್ಥ ಮಾಡ್ಕೋಬೇಕು ನೀನು. ಇಷ್ಟೂ ಗೊತ್ತಾಗ್ದಿದ್ದೋಳು ಸ್ಕೂಲಲ್ಲಿ ಮಕ್ಕಳಿಗೆ ಅದೆಂತಾ ಪಾಠ ಹೇಳಿಕೊಡ್ತಿ? ಲೋಕ ನಾವೆಂದುಕೊಂಡಷ್ಟು ಒಳ್ಳೇದೇನಲ್ಲ ಅಕ್ಕಾ. ನಯವಂಚಕರು ಬಗಲಲ್ಲೇ ಇರ್ತಾರೆ...' ಅಮ್ಮನ ಹಾಗೆ ಸಾಕಿ ಸಲಹಿದ ಅಕ್ಕನ ಹತ್ತಿರ ಇಂತಾ ಮಾತು ಹೇಳಿಕೊಳ್ಳಲು ಯಾಕೆ ಸಂಕೋಚ? ಹಿಂದೆಗೆತ? ಅಕ್ಕನ ತಲೆಗೆ ಹೀಗೊಂದು ಹುಳು ಬಿಟ್ಟರೆ ಪರಿಣಾಮ ಏನಾಗಿಬಿಡುತ್ತದೆಯೋ ಎಂಬ ಭಯ. ಒಂದು ಶಾಶ್ವತ ವೈರತ್ವವನ್ನು ತನ್ನ ಮಾತು ಹುಟ್ಟು ಹಾಕಿಬಿಟ್ಟರೆ ಎನ್ನುವ ಸಂಶಯ. ದೊಡ್ಡ ಜಗಳವೇ ನಡೆದುಹೋದರೆ ಎನ್ನುವ ಭೀತಿ. ಅವನು ತನ್ನೆಡೆಗೇ ಬೆಟ್ಟು ತಿರುಗಿಸಿದರೆ ಎನ್ನುವ ಅನುಮಾನ. ಯಾವುದರ ಪರಿಣಾಮ ಏನಾಗಿ, ಅದು ಮುಂದೆ ಯಾವ ರೀತಿಯಲ್ಲಿ ತನ್ನನ್ನು ಸುತ್ತಿಕೊಳ್ಳುತ್ತದೆಯೋ ಎನ್ನುವ ಕುರಿತು ವಿಪರೀತದ ಕಳವಳ, ಮುಂಜಾಗ್ರತೆ. ಜನ ಮದುವೆಯಾಗಿ ಮಕ್ಕಳೊಂದಿಗನಾಗಿರುವ, ಎಲ್ಲರ ಕಣ್ಣಿನಲ್ಲಿ ಸಭ್ಯನಾಗಿರುವ ಅವನನ್ನು ನಂಬುತ್ತಾರೆಯೇ ಹೊರತು ಕೆಲಸ ಬೊಗಸೆ ಇಲ್ಲದೆ ಮನೆಯಲ್ಲಿ ಖಾಲಿ ಕೂತ ತನ್ನನ್ನು ನಂಬಲಿಕ್ಕಿಲ್ಲ ಎನ್ನುವ ಸಂದೇಹ. ನಾಳೆ ಮದುವೆಯಾಗಲಿರುವವಳು ವೃಥಾ ಜನರ ಬಾಯಿಗೆ ಬೀಳಬಹುದಾದ ಅಂಜಿಕೆ. ಅಥವಾ ಕೆಲ ಹೆಣ್ಣುಮಕ್ಕಳಲ್ಲಿ ಸ್ವಭಾವ ಸಹಜವಾಗಿ ಇಂತದನ್ನು ಹೇಳಿಕೊಳ್ಳಲು ಇರುವಂತಾ ಹಿಂದೆಗೆತ; ಅಕ್ಕನ ಮನಸ್ಸನ್ನು ಅಲ್ಲೋಲಕಲ್ಲೋಲ ಮಾಡಬಾರದೆಂಬ ಯೋಚನೆ. ಏನೇನೋ ಗೋಜಲುಗಳು ಸೇರಿಕೊಂಡು ಅಕ್ಕನ ಕಿವಿಯವರೆಗೆ ಇದನ್ನು ತಲುಪಿಸುವ ಧೈರ್ಯ ಮಾಡಿರಲಿಲ್ಲ ವನಿತಾ. ತನ್ನ ಎಚ್ಚರಿಕೆಯಲ್ಲಿ ತಾನಿರುವುದೇ ಸರಿಯಾದ ಮಾರ್ಗ ಎಂದು ಅವಳು ನಿಶ್ಚಯಿಸಿಕೊಂಡುಬಿಟ್ಟಿದ್ದಳು.

★★★

ತಂಗಿಗೆ ಮದುವೆ ಮಾಡಬೇಕು, ಅದು ತಾನು ಪೂರೈಸಬೇಕಾದ ಕೊನೆಯ ಕರ್ತವ್ಯ ಎನ್ನುವ ಕುರಿತು ಭಾಗ್ಯನಿಗೆ ಅರಿವು ಇಲ್ಲದೆ ಇರಲಿಲ್ಲ. ಆದರೆ ಮದುವೆಯಾಗಿ ಅವಳು ಗಂಡನ ಮನೆಗೆ ಹೊರಟು ಹೋದರೆ ತಾನು ಎಂದೆಂದಿಗೂ ಒಬ್ಬಂಟಿ ಎನ್ನುವ ಭಾವನೆ ಅವಳ ಕರ್ತವ್ಯಪ್ರಜ್ಞೆಗೆ ತಡೆ ಹಾಕುತ್ತಿತ್ತು. ಮನಸ್ಸು ಮಾಡಿದರೆ ತಾನೂ ಮದುವೆಯಾಗಬಹುದೇನೋ. ಆದರೆ ವಯಸ್ಸು